KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/270426/2026/1027

ದಿನಾಂಕ:04/11/2026

ಸುತ್ತೋಲೆ

ವಿಷಯ: ನವೆಂಬರ್/ಡಿಸೆಂಬರ್ 2026 ರಲ್ಲಿ ಜರಗುವ ಸ್ನಾತಕ NEP/Revised NEP/ Revised NEP(NEW) ಪದವಿಯ1, 3, 5 ಮತ್ತು 7 ನೇ ಸೆಮಿಸ್ಟರ್‌ನ (ರೆಗ್ಯೂಲರ್/ರಿಪೀಟರ್) ಪರೀಕ್ಷೆಗೆ ಹಾಜರಾಗಬೇಕಾಗಿರುವ ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಮಾಹಿತಿಯನ್ನು kudqp.aargees.org ತಂತ್ರಾಂಶದಲ್ಲಿ ಅಳವಡಿಸುವ ಕುರಿತು.

****@****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ನವೆಂಬರ್/ಡಿಸೆಂಬರ್ 2026 ರಲ್ಲಿ ಜರಗುವ ಸ್ನಾತಕ NEP/Revised NEP/ Revised NEP(NEW) ಪದವಿಯ 1, 3, 5 ಮತ್ತು 7 ನೇ ಸೆಮಿಸ್ಟರ್‌ನ (ರೆಗ್ಯೂಲರ್/ರಿಪೀಟರ್) ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅಧಿಸೂಚನೆಗಳ ಮೂಲಕ ಅವಕಾಶ ನೀಡಲಾಗಿತ್ತು. ಕಾರಣ, ಸದರಿ ಪರೀಕ್ಷೆಗಳನ್ನು ಜರುಗಿಸಲು ವಿಷಯವಾರು ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳ ಮಾಹಿತಿಯು ಅವಶ್ಯಕವಾಗಿರುತ್ತದೆ.

ಆದುದರಿಂದ, ಕಡ್ಡಾಯವಾಗಿ ಆಯಾ ಮಹಾವಿದ್ಯಾಲಯದವರೆ ಎಲ್ಲ ಸ್ನಾತಕ NEP/Revised NEP/ Revised NEP(NEW) ಪದವಿಗಳ 1, 3, 5 ಮತ್ತು 7 ನೇ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ರೆಗ್ಯೂಲರ್+ರಿಪೀಟರ್ ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ನಿಖರವಾದ (Roundoff ಮಾಡದೇ) ಮಾಹಿತಿಯನ್ನು ಕ್ರೋಢೀಕರಿಸಿ ಈ ಕೆಳಕಾಣಿಸಿದ Weblink ದಲ್ಲಿ ನಮೂದಿಸುವುದು ಹಾಗೂ ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಮುಂದುವರೆದು, ತಾವು ಕಳುಹಿಸಿದ ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಆಧಾರದ ಮೇಲೆಯೇ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಾಗುತ್ತದೆ. ಕಾರಣ, ಸದರ ಮಾಹಿತಿಯನ್ನು Weblink ದಲ್ಲಿ **ದಿನಾಂಕ:05/11/2026** ರ ಒಳಗಾಗಿ ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ. ಅದೇ ರೀತಿ, ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಸರಿಯಾದ ಮಾಹಿತಿಯನ್ನು ನೀಡದೆ ಇದ್ದಲ್ಲಿ ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ E-Mail ಮುಖಾಂತರ ಅಥವಾ Whatsapp ನಲ್ಲಿ ಸಲ್ಲಿಸಿದ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ.

1) Weblink: kudqp.aargees.org
2) User Name: UG- ಎಂದು ಟೈಪ್ ಮಾಡಿ ಮುಂದೆ ತಮ್ಮ ಕಾಲೇಜಿನ UUCMS ಕೋಡ ಟೈಪ್ ಮಾಡುವುದು
3) Password: ಪಾಸವರ್ಡ ತಮ್ಮ ಕಾಲೇಜಿನ UUCMS ಕೋಡ್ ಆಗಿರುತ್ತದೆ

04/11/2026

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1) ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಂತರ್ಜಾಲದಲ್ಲಿ ಪ್ರಕಟಿಸುವುದು)
3) ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4) ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.